## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1000

ಸದಸ್ಯರ ಹೆಸರು : ಡಾ: ಉಮಾಶ್ರೀ

ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು

ಉತ್ತರಿಸುವ ದಿನಾಂಕ : 20.08.2025

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ. | ಮಂಗಳೂರು ಭಾಗದ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ಪ್ರಯಾಣ ಮಾಡುವ ಪ್ರಯಾಣಿಕರಿಂದ ನಿಗದಿತ ಟಿಕೆಟ್ ದರಕ್ಕಿಂತ ಹೆಚ್ಚುವರಿಯಾಗಿ ಹಣ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ:ಟಿಡಿ 81 ಟಿಡಿಒ 2020, ದಿನಾಂಕ:29.07.2020ರನ್ವಯ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಹೊರಡಿಸಿರುವ ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ:822ರಂತೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್ಸುಗಳಲ್ಲಿ ಪ್ರಯಾಣದರಗಳನ್ನು ಆಕರಿಸಲಾಗುತ್ತದೆ. **ನಿಗದಿತ ಟಿಕೆಟ್ ದರಗಳಿಗಿಂತ ಹೆಚ್ಚುವರಿಯಾಗಿ ಹಣ ವಸೂಲಿ ಮಾಡುತ್ತಿರುವುದಿಲ್ಲ.** |
| ಆ. | ಡಿಜಿಟಲ್ ಪೇಮೆಂಟ್ ಮಾದರಿ ಯಾವಾಗಿನಿಂದ ಜಾರಿಯಾಗಿದೆ; ಟಿಕೆಟ್‌ಗಾಗಿ ಡಿಜಿಟಲ್ ಪೇಮೆಂಟ್ ಮಾಡದೆ ನಗದು ಪಾವತಿ ಮಾಡುವ ಪ್ರಯಾಣಿಕರಿಗೆ ಹೆಚ್ಚುವರಿ ಹಣ ವಸೂಲಿಯಿಂದ ತೊಂದರೆಯಾಗಿದೆ ಎಂಬ ದೂರುಗಳು ಬಂದಿದೆಯೇ; | ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಸಾರಿಗೆಗಳಲ್ಲಿ ಟಿಕೆಟ್ ಮೊತ್ತವನ್ನು ಡಿಜಿಟಲ್ ಪೇಮೆಂಟ್ (ಆನ್‌ಲೈನ್ ಪಾವತಿ) ಮುಖೇನ ಪಾವತಿಸುವ ಸೌಲಭ್ಯವನ್ನು ದಿನಾಂಕ:09.11.2024 ರಿಂದ ಜಾರಿಗೆ ತರಲಾಗಿದ್ದು, ಟಿಕೆಟ್ ಮೊತ್ತವನ್ನು ಡಿಜಿಟಲ್ ಪೇಮೆಂಟ್ ಅಥವಾ ನಗದಾಗಿ ಪಾವತಿಸಬಹುದಾಗಿದ್ದು, ಟಿಕೆಟ್ ದರ/ ಪ್ರಯಾಣದರದಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ. ಅಲ್ಲದೇ ಈ ಬಗ್ಗೆ ಯಾವುದೇ ದೂರುಗಳು ಸಹ ಸ್ವೀಕೃತವಾಗಿರುವುದಿಲ್ಲ. |
| ಇ. | ಟಿಕೆಟ್‌ನಲ್ಲಿ ನಿಗದಿಪಡಿಸಿರುವ ದರಕ್ಕಿಂತ ಹೆಚ್ಚು ದರ ಪಡೆಯಲು ಸರ್ಕಾರದಿಂದ ಸೂಚನೆ | ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಟಿಡಿ 81 ಟಿಡಿಒ 2020, ದಿನಾಂಕ:29-07-2020ರ III(ಜಿ)ನಲ್ಲಿ ಜನಸಂದಣಿ ಹೆಚ್ಚಾಗುವ ಯಾವುದೇ ದಿನ/ದಿನಗಳಲ್ಲಿ ಅಥವಾ ಹಬ್ಬ, ಜಾತ್ರೆ, ವಾರಾಂತ್ಯ ದಿನಗಳಲ್ಲಿ ಪ್ರಸ್ತುತ ವಿಧಿಸುತ್ತಿರುವ ದರಕ್ಕಿಂತ ಎರಡು ಪಟ್ಟು ಹೆಚ್ಚಾಗದಂತೆ ಪ್ರಯಾಣ ದರ ವಿಧಿಸಲು ಅವಕಾಶವಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಅಥವಾ ಆದೇಶ ಮಾಡಲಾಗಿದೆಯೇ; ಹಾಗಿದ್ದಲ್ಲಿ, ಯಾವ ಕಾರಣಕ್ಕೆ ಇಂತಹ ಆದೇಶ ಮಾಡಲಾಗಿದೆ? | ಪ್ರಮುಖ ಹಬ್ಬ/ಜಾತ್ರೆ ಹಾಗೂ ರಜಾ ದಿನಗಳಲ್ಲಿ ನಿಗಮದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ ಕಾರ್ಯಾಚರಿಸುವ ವಿಶೇಷ/ಹೆಚ್ಚುವರಿ ಸಾರಿಗೆಗಳಲ್ಲಿ ಏಕಮುಖ (One way) ಸಂಚಾರ ಒತ್ತಡವಿರುವುದರಿಂದ, ವಿರುದ್ಧ ದಿಕ್ಕಿನಿಂದ ಬಸ್ಸುಗಳನ್ನು ವಿರಳ ಪ್ರಯಾಣಿಕರಿಂದಾಗಿ ಖಾಲಿಯಾಗಿ ಆಚರಣೆ ಮಾಡಬೇಕಾಗುತ್ತದೆ. ಇದರಿಂದಾಗಿ ನಿಗಮಕ್ಕೆ ನಷ್ಟವಾಗುತ್ತದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಅವರಿಗೆ ಹೆಚ್ಚಿನ ಹೊರೆಯಾಗದಂತೆ ನಿಗಮದಿಂದ ಆಚರಣೆ ಮಾಡುವ ವಿಶೇಷ/ಹೆಚ್ಚುವರಿ ಸಾರಿಗೆಗಳಲ್ಲಿ ಮಾತ್ರ ಶೇ.10 ರಿಂದ 20ರಷ್ಟು ಹೆಚ್ಚು ಪ್ರಯಾಣ ದರವನ್ನು ವಿಧಿಸಲಾಗುತ್ತಿದೆ. |

ಸಂಖ್ಯೆ: ಟಿಡಿ 185 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)

ಸಾರಿಗೆ ಮತ್ತು ಮುಜರಾಯಿ ಸಚಿವರು